ಬೇಕಾದರೆ ಬಡಿಸಿಕೊಂಡು ಉಣ್ಣು ಅಂದೆ. ಕುಡಿದ ಅಮಲು ಏರಿತ್ತು. ಕೈಯಲ್ಲಿ ಇದ್ದ ಕೋಲು ಎತ್ತಿ ಹೊಡೆಯೋಕೆ ಬಂದ್ಬಿಟ್ಟ ದೊಡ್ಡದಾಗಿ...''

''ಹೊಡೆದ್ನಾ... ಮಗು ಮಡಿಲಲ್ಲಿ ಮಲಗಿತ್ತಲ್ವಾ?!'' ಭಯ, ಗಾಬರಿಯಲ್ಲಿ ಅತ್ತೆ ಮಾವ ಇಬ್ಬರೂ ಒಟ್ಟಿಗೆ ಕೇಳಿದರು. ನಿಂಗಿ ನಸುನಕ್ಕಳು. ರುಕ್ಮಿಣಿಯೆದೆ ಢವಢವಗುಟ್ಟಿತು. ಆದರೆ, ನಿಂಗಿ ಮುಖದಲ್ಲಿ ವಿಜಯದ ನಗು.

''ಹೊಡೆಯೋದಾ?... ಕೋಲು ನನ್ನ ಮೈಗೆ ತಾಗುವುದಕ್ಕೆ ನಾನು ಬಿಟ್ರೆ ತಾನೆ? ಕೋಪ ನುಂಗಿ ಬದುಕೋಕೇನು ದಾಡಿ ಅವನಿಗೆ. ಕೋಪಕ್ಕೆ ಹೆಂಗಸು ಗಂಡಸು ಅಂತ ಉಂಟಾ? ಇಬ್ಬರೂ ಹೊಂದಿಕೊಂಡು ಹೋದ್ರೆ ಅಲ್ವಾ ಸಂಸಾರ. ಹಾಂಗೆಲ್ಲಾ ಹೊಡಿಸಿಕೊಳ್ಳೋಕೆ ನನಗೂ ಜೀವ ಇದೆ ಅಲ್ವಾ. ಅವನು ಎತ್ತಿದ ಕೋಲನ್ನು ಕಿತ್ತು ನಾನು ಅದನ್ನು ಅವನೆದುರೇ ಎರಡು ತುಂಡಾಗಿ ಮುರಿದುಬಿಟ್ಟೆ. ಅವನ ಕೋಪ ತಾಪ ಎಲ್ಲಾ ಹೇಗೆ ಜರ‍್ರನೆ ಜಾರಿತ್ತು ಗೊತ್ತಾ! ಏನಂದುಕೊಂಡಿದ್ದಾನೆ ನನ್ನ?'' ಅವಳ ಮುಖ ತುಂಬಾ ಅಸಹನೆಯ ನೆರಳು.

''ಕೋಲು ಮುರಿದೆಯಾ?'' ಮಾವನ ಧ್ವನಿಯಲ್ಲಿ ನಿಯಂತ್ರಿಸಲಾಗದ ನಡುಕ. ಅವಳು ಮೆಲುಧ್ವನಿಯಲ್ಲಿ ತಲೆ ಮೇಲಕ್ಕೆ ಎತ್ತದೇ ಉತ್ತರಿಸಿದಳು:

''ಕ್ಷಮಿಸಿ ಯಜಮಾನ್ರೆ. ಅದು ನಿಮ್ಮ ಕೋಲು ಅಲ್ವಾ... ಆ ಗಲಾಟೆಯಲ್ಲಿ ನನಗೆ ನೆನಪಾಗಲೇ ಇಲ್ಲ.'' ಅವಳ ಧ್ವನಿಯಲ್ಲಿ ಈಗ ಅಸಹಾಯಕತೆಯ ಲೇಪನ. ಯಾರೂ ಮಾತನಾಡಲಿಲ್ಲ. ಇರಿಯುವ ಮೌನವನ್ನು ಸೀಳಿ ಮಕ್ಕಳ ಧ್ವನಿ ಬಂತು.

''ಅಜ್ಜಾ...''

ರುಕ್ಮಿಣಿ ಮಾವನ ಕಡೆ ನೋಡುವಷ್ಟರಲ್ಲಿ ಅತ್ತೆ ಅವರ ಕಡೆಗೆ ಓಡಿಯಾಗಿತ್ತು. ಮಾವ ಗೋಡೆಗೆ ಒರಗಿಕೊಂಡೇ ಮೆಲ್ಲಗೆ ನೆಲಕ್ಕೆ ಜಾರಿದ್ದರು. ರುಕ್ಮಿಣಿ ಓಡಿ ಹೋಗಿ ನೀರು ತಂದು ಮಾವನ ಮುಖಕ್ಕೆ ಚಿಮುಕಿಸಿದರೆ, ಅತ್ತೆ ಗಂಡನ ತಲೆಯನ್ನು ಎತ್ತಿ ಮಡಿಲಲ್ಲಿ ಇರಿಸಿಕೊಂಡಿದ್ದರು. ಸುತ್ತಲೂ ಗಾಬರಿಯಿಂದ ನೆರೆದ ಮುಖಗಳು. ಅತ್ತೆಯ ಆರ್ತನಾದಕ್ಕೆ ನಿಧಾನವಾಗಿ ಅರೆ ಮುಚ್ಚಿದ ಕಂಗಳನ್ನು ಬಲವಂತವಾಗಿ ತೆರೆದು ಮಡದಿಯ ಮೊಗ ನೋಡಿದ ಮಾವ ನೀಳ ಉಸಿರೊಂದನ್ನು ಹೊರಬಿಟ್ಟು, ಮೆಲ್ಲಗೆ ನುಡಿದರು.

''ನೀನೂ ಮುರಿದುಬಿಡಬಹುದಿತ್ತಲ್ಲವೇನೇ ಕೋಲು...''

ಆ ಧ್ವನಿಯಲ್ಲಿ ಅಷ್ಟೂ ವರ್ಷಗಳ ಕಾಲ ಅದುಮಿಟ್ಟ ಅಸಹಾಯಕತೆ, ಪಶ್ಚಾತ್ತಾಪದ ಹಸಿ ಹಸಿ ಘಾಟಿನ ಜೊತೆ ನೋವು ಜಿನುಗಿ ತೊಟ್ಟಿಕ್ಕುತ್ತಿತ್ತು. ಅತ್ತೆ ಬಿಕ್ಕಿ ಬಿಕ್ಕಿ ಜೋರಾಗಿ ಅತ್ತರು. ರುಕ್ಮಿಣಿ ಮತ್ತು ಇತರರು ಕಣ್ಣು ಬಾಯಿ ಬಿಟ್ಟು ನೋಡುತ್ತಿರುವಂತೆಯೇ ಹಿರಿಜೀವದ ಅರೆ ಅರಳಿದ ಕಂಗಳು ನಿಧಾನವಾಗಿ ಮುಚ್ಚಿಕೊಂಡವು. ಅವು ಪುನಃ ತೆರೆಯಲೇ ಇಲ್ಲ.

**ರಾಜಶ್ರೀ ಟಿ. ರೈ ಪೆರ್ಲ**

ತುಳು, ಕನ್ನಡ ಭಾಷೆಗಳಲ್ಲಿ ಬರೆಯುವ ರಾಜಶ್ರೀ ಕಾಸರಗೋಡಿನ ಪೆರ್ಲದವರು. ನಾಲ್ಕು ಕಾದಂಬರಿ, ಒಂದು ಕಥಾಸಂಕಲನ, ಒಂದು ಕವನ ಸಂಕಲನ ಪ್ರಕಟಿಸಿದ್ದಾರೆ. ತುಳು ಕತೆಗಳು ಇಂಗ್ಲಿಷ್‌ಗೆ ಅನುವಾದಗೊಂಡಿವೆ. ಕತೆ, ಕವನ, ಕಾದಂಬರಿ, ಲೇಖನ, ಹಾಸ್ಯ ಬರಹಗಳು ಪತ್ರಿಕೆಗಳಲ್ಲಿ ಪ್ರಕಟಗೊಂಡಿವೆ.